CW : 8
PW : 6

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## **CC No**.53/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಅಶ್ಫಾನ್ ಬಿ. ಎಸ್. |
| ತಂದೆಯ ಹೆಸರು | : | ಬಿ. ಎ. ಶಂಶುದ್ದೀನ್ |
| ಪ್ರಾಯ | : | 42 |
| ಉದ್ಯೋಗ | : | Sr. MV Inspector, RTO, ಪುತ್ತೂರು |
| ವಾಸಸ್ಥಳ | : | ಪುತ್ತೂರು |
| ದಿನಾಂಕಃ 10.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನಾನು ಜುಲೈ 2023 ರಿಂದ ಇಲ್ಲಿಯವರೆಗೆ ಪುತ್ತೂರು ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಹಿರಿಯ ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ01.10.2024 ರಂದು ಪುತುತ್ತಾರು ಸಂಚಾರಿ ಠಾಣೆಯ ಪೋಲೀಸರ ಮನವಿ ಪತ್ರದ ಮೇರೆಗೆ ಅದೇ ದಿನ ಸುಮಾರು ಮಧ್ಯಾಹ್ನ 2.05 ಗಂಟೆಗೆ ಠಾಣೆಯ ಆವರಣಕ್ಕೆ ಭೇಟಿ ನೀಡಿ, KA19EK3688 & KA12MB4429ವಾಹನಗಳನ್ನು ಪರೀವಿಕ್ಷಣೆ ಮಾಡಿ ವಾಹನಗಳಿಗೆ ಜಖಂಗಳು ಈ ಕೆಳಗಿನಂತೆ ಆಗಿರುತ್ತವೆ. KA19EK3688 ಬೈಕ್ ಗೆ ಈ ಕೆಳಕಂಡ ಜಖಂಗಳು ಆಗಿರುತ್ತವೆ.

CW : 8
PW : 6

1. ಮುಂದಿನ ವೈಸರ್, ವೀಲ್ ಮಡ್ ಗಾರ್ಡ್, ಎರಡೂ ಬದಿಯ ಬಾಡಿ, ಕ್ರ್ಯಾಶ್ ಗಾರ್ಡ್ ನ ಎಡಬದಿ, ಬ್ಯಾಟರಿ ಕವರ್, ಮುಂದಿನ ನಂಬರ್ ಪ್ಲೇಟ್, ಫ್ಯೂಲ್ ಟ್ಯಾಂಕ್ ಜಖಂಗೊಂಡಿರುತ್ತವೆ.

2. ಹೆಡ್ ಲೈಟ್, ಟೇಲ್ ಲ್ಯಾಂಪ್, ಬಲಬದಿಯ ರೀಯರ್ ವೀವ್ ಮಿರರ್ ಒಡೆದಿರುತ್ತವೆ.

KA12MB4429 ಕಾರಿಗೆ ಈ ಕೆಳಕಂಡ ಜಖಂಗಳು ಆಗಿರುತ್ತವೆ.

1. ಮುಂದಿನ ಗಾಜು, ಎಡಬದಿಯ ಹೆಡ್ ಲೈಟ್ ಹಾಗೂ ಇಂಡಿಕೇಟರ್ ಒಡೆದಿರುತ್ತವೆ.

2. ಬಾನೆಟ್, ಮುಂದಿನ ಬಂಪರ್, ಎಡಬದಿಯ ಟೆಂಡರ್ ಜಖಂಗೊಂಡಿರುತ್ತವೆ.

ಸದರಿ 2 ವಾಹನಗಳನ್ನು ಚಲಾಯಿಸಿ ಪರಿಶೀಲಿಸಲಾಗಿ 2 ವಾಹನದ ಅಡೆತಡೆಗಳು ಸುಸ್ಥಿತಿಯಲ್ಲಿದ್ದವು. ಸದರಿ ಅಪಘಾತವು ವಾಹನಗಳ ಯಾವುದೇ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಕುರಿತು ನಾನು ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು **ನಿಪಿ–8** ಎಂದು ಸಾಕ್ಷಿಯ ಸಹಿಯನ್ನು **ನಿಪಿ–8(ಎ)** ಎಂದು ಗುರುತಿಸಲಾಯಿತು.

**ಪಾಟಿಸವಾಲು ಆರೋಪಿ ಪರ ಶ್ರೀ GJR ವಕೀಲರಿಂದಃ**

ನಾನು ಅಪಘಾತವಾದ ತಕ್ಷಣ ಅಪಘಾತ ಸ್ಥಳಕ್ಕೆ ಹೋಗಿರುವುದಿಲ್ಲ. ಅಪಘಾತ ಸ್ಥಳದಿಂದ ವಾಹನಗಳನ್ನು ಠಾಣೆಗೆ ಹೇಗೆ ತಂದಿದ್ದಾರೆ ಎಂದು ಹೇಳಲಾಗುವುದಿಲ್ಲ. ಅಪಘಾತ ಸ್ಥಳವನ್ನು ದಾಖಲಾತಿಯ ಆಧಾರದ ಮೇಲೆ ಹೇಳಬಹುದು. ಸ್ಥಳದಲ್ಲಿ ಏನಾದರೂ ರಿಪೇರಿ/ ಬದಲಾವಣೆ ಮಾಡಿರುತ್ತಾರಾ ಎಂದು ನನಗೆ ಹೇಳಲಾಗುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ತನಿಖೆಗೆ ಪೂರಕವಾಗುವಂತೆ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾಹನಗಳನ್ನು ತಪಾಸಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಾಲಂ 9 ನ್ನು ಮತ್ತು ಜಖಂಗಳನ್ನು ಪ್ರಕರಣಕ್ಕೆ ಪೂರಕವಾಗಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಪರಿವೀಕ್ಷಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

CW : 8
PW : 6

**<u>ಮರುವಿಚಾರಣೆಃ ಇಲ್ಲ</u>**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು